ಶ್ರೀ ಜಿ. ಬಸವಣ್ಣಪ್ಪ: ಅಪೆಕ್ಸ್ ಬ್ಯಾಂಕ್‌ಗೆ ನೀವು ರೆಮಿಟ್ ಮಾಡಿದ್ದರೂ ಸಹ ಸಹಕಾರಿ ಸಂಘಗಳು ನೂರು ಪರ್ಸೆಂಟ್‌ನಷ್ಟು pay ಮಾಡಿದ್ದಾರೆ. ಆದರೆ ಅವರಿಗೆ ಮರು ಸಾಲ ಕೊಡಲು ಅಪೆಕ್ಸ ಬ್ಯಾಂಕಿನಿಂದ ಹಣ ಬಂದಿಲ್ಲವೆಂಬ ದೂರಿದೆ.

ಶ್ರೀ ಎಸ್.ಎಸ್. ಪಾಟೀಲ್: ಈಗಾಗಲೇ ಯಾರು ಸಾಲ ಪಂಚಿದ್ದಾರೆ ಅವರಿಗೆಲ್ಲ ಕೊಟ್ಟಿದ್ದೇವೆ. ಆದರೆ ಹೊಸ ಮೆಂಬರ್‌ಗಳನ್ನು ಮಾಡಿಕೊಳ್ಳುವುದು, ಮತ್ತು ಹೊಸದಾಗಿ ಕೆಲವು ಸಂಘಗಳು ನ್ಯಾಷನಲೈಸ್ಡ್ ಬ್ಯಾಂಕ್‌ಗೆ cede ಆಗಿದ್ದವು ಅವರಿಗೆ ಮಾತ್ರ ಕೊಡುವುದಕ್ಕೆ ಆಗಿಲ್ಲ ನಮಗೆ. ನಬಾರ್ಡನವರು ನಮಗೆ ಸ್ವಲ್ಪ ಲಿಮಿಟ್ ಕಡಿಮೆ ಮಾಡಿದ್ದಾರೆ. ಹೋದ ಸಲ ನಮಗೆ 204 ಕೋಟಿ ಮಂಜೂರು ಮಾಡಿದ್ದರೆ ಈ ಸಲ 173 ಕೋಟಿಯಷ್ಟೇ ಮಂಜೂರು ಮಾಡಿದ್ದಾರೆ, ಆ ದಿಸೆಯಲ್ಲಿ ಕೂಡ ಪ್ರಯತ್ನ ಮಾಡುತ್ತಿದ್ದೇವೆ, ಬಂದ ನಂತರ ಎಲ್ಲರಿಗೂ ಒದಗಿಸಲಾಗುವುದು.

ಶ್ರೀ ಕೆ.ಎನ್. ನಾಗೇಗೌಡ: ಅಧ್ಯಕ್ಷರೇ ಬಹಳ ಪ್ರಮುಖವಾದ ಪ್ರಶ್ನೆ. ನಬಾರ್ಡ್‌ನಿಂದ 300 ಕೋಟಿ ಕೇಳಿದ್ದರೂ 170 ಕೋಟಿ ಬಂದಿದೆಯೆಂದು ಏನು ಹೇಳಿದಿರಿ 50 ಪರ್ಸೆಂಟ್ ನಿಮಗೆ ಬಂದಿದೆ, ನಮ್ಮ ಡಿಸಿಸಿ ಬ್ಯಾಂಕಿನಲ್ಲಿ ಸುಮಾರು 40 ಪರ್ಸೆಂಟ್ ಕೆಲವು ಕಡೆ ರಿಕವರಿ ಆಗಿದೆ. ನಮ್ಮ ಮಂಡ್ಯ ಡಿಸಿಸಿ ಬ್ಯಾಂಕಿನಲ್ಲಿ ಸುಮಾರು 15 ಕೋಟಿ ರೂ. ಸಾಲ ಬೆಳೆಗೆ ಬೇಕಾಗಿದೆ. ಅವರ ಹತ್ತಿರ ಇರುವುದೇ ಕೇವಲ 5 ಕೋಟಿ ರೂ, ಆದ್ದರಿಂದ ಬೆಳೆ ಸಾಲದ ರೈತರಿಗೆ ಸಾಕಷ್ಟು ತೊಂದರೆಗಳಾಗಿದೆ. ಡಿಸಿಸಿ ಬ್ಯಾಂಕಿಗಳಲ್ಲಿ ಎಲ್‌ಸಿಎಸ್ ಸೊಸೈಟಿ ಮತ್ತೊಂದು ಕಡೆ ಬಿಎಲ್‌ಡಿ ಬ್ಯಾಂಕ್‌ಗಳಲ್ಲೂ ಸಿಕ್ಕುತ್ತಿಲ್ಲ. 40 ಪರ್ಸೆಂಟ್ ರಿಕವರಿ ಆಗಿದೆ ಇದ್ದರೆ ಟ್ರಾಕ್ಟರ್ ಲೋನಾಗಲಿ, ಪೌಲ್ಟ್ರಿ ಲೋನಾಗಲಿ ಮತ್ತೊಂದು ಸಿಗುತ್ತಿಲ್ಲ.

10.40 ಎ.ಎಂ.

ಇದಕ್ಕೆ ನಬಾರ್ಡ್ ಜೊತೆಯಲ್ಲಿ ಮಾತನಾಡಿ ಹಣ ತೆಗೆದುಕೊಂಡು ಬಂದು ಏನಾದರೂ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಿದೆಯೇ?

ಶ್ರೀ ಎಸ್.ಎಸ್. ಪಾಟೀಲ್: ನಾವು ನಬಾರ್ಡ್‌ನೊಂದಿಗೆ ವ್ಯವಹರಿಸುತ್ತಿದ್ದೇವೆ. ಅವರು ಮಂಜೂರು ಮಾಡಿದರೆ ನಾವು ಈ ಒಂದು ವ್ಯವಸ್ಥೆ ಮಾಡುತ್ತಿದ್ದೇವೆ. ಆದರೂ ನಮ್ಮಲ್ಲಿರತಕ್ಕಂತಹ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಾಧ್ಯವಾದಷ್ಟು ಪ್ರಯತ್ನ ಮಾಡಿದ್ದೇವೆ. ಹೋದಸಲ ಈ ವೇಳೆಗೆ 170 ಕೋಟಿ ರೂಪಾಯಿ ಪಂಚಿದ್ದರೆ ಈ ಸಲ 307 ಕೋಟಿ ರೂಪಾಯಿಗಳ ಸಾಲವನ್ನು ಈಗಾಗಲೇ ಕೊಟ್ಟಿದ್ದೇವೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಳಿಗಳ ಬಾಕಿ ಉಳಿದ ಕೆಲಸ ಮಾಡುವ ಕುರಿತು.

876 - ಡಾ. ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಳಿಯಿಂದ ತೀರ್ಮಾನವಾಗದೆ ಇದ್ದು ಹಾಗೂ ಉಚ್ಚ ನ್ಯಾಯಾಲಯದಿಂದ ಪುನಃ ಭೂ ನ್ಯಾಯ ಮಂಡಳಿಗೆ ಕಳುಹಿಸಲಾದ ಅನೇಕ ಪ್ರಕರಣಗಳು ತೀರ್ಮಾನವಾಗದೆ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ಪರಿಹರಿಸಲು ಸರ್ಕಾರ ಪುನಃ ಭೂ ನ್ಯಾಯ ಮಂಡಳಿ ರಚಿಸುವುದೇ?*

ಆ) *ಭೂ ನ್ಯಾಯ ಮಂಡಳಿ ರಚಿಸದೆ ಇದ್ದಲ್ಲಿ ಕಾನೂನು ತಿದ್ದುಪಡಿ ಮಾಡಿ ಈ ಅಧಿಕಾರ ಇತರ ಕೋರ್ಟುಗಳಿಗೆ ಕೊಡಲು ಸಾಧ್ಯವೆ?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು)

ಅ) ಹೌದು

ಆ) ಸಧ್ಯದಲ್ಲಿಯೇ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಲಾಗುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಡಾ. ಯು. ಚಿತ್ತರಂಜನ್: 2-3 ವಿಚಾರಗಳ ಬಗ್ಗೆ ಮಾತ್ರ ಅತ್ಯಂತ ಸಂಕ್ಷಿಪ್ತವಾಗಿ ಕ್ಲಾರಿಫಿಕೇಷನ್ ಕೇಳಬಯಸುತ್ತೇನೆ. ದಿನಾಂಕ: 1-3-74 ರಲ್ಲಿ ಆಗಬೇಕಾದಂಥ ಕಾಯಿದೆ 25 ವರ್ಷಗಳಾದರೂ ಆಗಿಲ್ಲ. ನಾವು ಇವತ್ತು 1995ನೇ ಇಸವಿಯಲ್ಲಿದ್ದೇವೆ ಆದರೂ ಕೂಡ ಬಡವನಿಗೆ ನ್ಯಾಯ ಕೊಡಲಿಕ್ಕೆ ನಮ್ಮ ಹತ್ತಿರ ಆಗಲಿಲ್ಲವೆನ್ನುವುದನ್ನು ಮಾನ್ಯ ಸಚಿವರು ಗಮನಿಸ ಬೇಕು. ಮಾನ್ಯ ದೇವರಾಜ ಅರಸರು ಬಹಳ ಕ್ರಾಂತಿಕಾರಿ ಬದಲಾವಣೆ ಮಾಡಿದ್ದರು. 1974 ರಿಂದ ಮಾಡಬೇಕಾಗಿತ್ತು ಇಂದಿಗೆ 25 ವರ್ಷವಾಯಿತು ಇಲ್ಲಿ ಬಡವನ ಜೀವನ್ಮರಣದ ಪ್ರಶ್ನೆ ಇದೆ. ಅನೇಕ ಒಕ್ಕಲಿಕೆ ಆಗಿದೆ. ಇದನ್ನು ತುರ್ತಾಗಿ ಬಗೆಹರಿಸುವುದಕ್ಕೆ ಸರಕಾರ ಲಕ್ಷ್ಯ ಹರಿಸಿದೆಯೇ? ಎರಡನೆಯದು ಫಾರಂ ನಂ. 7ರಲ್ಲಿ ಡಿಕ್ಲರೇಷನ್ ಒಕ್ಕಲು ಅಂದರೆ ಆ ಟೆನೆಂಟ್ ಏನು ಕೊಟ್ಟಿದ್ದಾರೆ ಇಂಥಾದ್ದು ಕೆಲವು ಕಡೆಗಳಲ್ಲಿ ಕೊಡಲಿಕ್ಕೆ ಆಗಲಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 21,000 ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹುಶಃ ಎರಡು ಪಟ್ಟು ಅಂದರೆ 40,000 ಇರಬಹುದು 21ಸಾವಿರ ಜನ ಡಿಕ್ಲರೇಷನ್ ಕೊಡಲಿಲ್ಲ. ಇದು ನಮ್ಮ ಭೂ ಸುಧಾರಣಾ ಕಾಯಿಗೆ ಪ್ರಕಾರ it vests with the Government. Neither the Tenant is the owner nor the Landlord is the owner. It vests with the Government.

ಈ ತ್ರಿಶಂಕು ಪರಿಸ್ಥಿತಿಯಲ್ಲಿ 21 ಸಾವಿರ ಕೆಲಸಗಳು ಬಾಕಿ ಇವೆ. ಈ ಕಾಯಿದೆಯಲ್ಲಿ ಏನು ಇದೆ ಎಂದರೆ the High Court can only remand the cases to the Tribunal.

ಟ್ರಿಬ್ಯುನಲ್ಲಿಗೆ ಅದನ್ನು ವಾಪಸ್ ಕಳುಹಿಸಿ ಇಲ್ಲಿ ದೋಷವಾಗಿದೆ ಅದನ್ನು ಸರಿಯಾಗಿ ತಿದ್ದುಪಡಿ ಮಾಡಿ ಎಂದು ಹೇಳಿದೆ. ಅದಕ್ಕೆ ಒಂದು ಎಕ್ಸ್‌ಪ್ರೆಷನ್ ನೀವು ಹೇಳಬಹುದು. ಹೈಕೋರ್ಟಿನಲ್ಲಿ ಜಸ್ಟೀಸ್ ಕುದೂರು ರೈರವರು ಕೊಟ್ಟಂತಹ ಒಂದೇ ಒಂದು ತೀರ್ಪನ್ನು ಸುಪ್ರೀಂ ಕೋರ್ಟಿನಲ್ಲಿ ಎತ್ತಿ ಹಿಡಿದಿದೆ.

ಇದೊಂದು ಉದಾಹರಣೆ ಇದೆ. ಸಾಮಾನ್ಯವಾಗಿ ಎಲ್ಲ ಕೇಸುಗಳು ವಾಪಸ್ಸು ಟ್ರಿಬ್ಯುನಲಗೆ ಹೋಗುತ್ತಿವೆ.

It is a vicious circle.

ಇದೊಂದು ವಿಷವೃತ್ತ. ಯಾರಿಗೆ, ಟೆನೆಂಟ್‌ಗೆ. ಹೈಕೋರ್ಟಿನಿಂದ ಟ್ರಿಬ್ಯುನಲ್ಲಿಗೆ ಹೋಗುತ್ತದೆ ಟ್ರಿಬ್ಯುನಲ್‌ನಿಂದ ಹೈಕೋರ್ಟಿಗೆ ಹೋಗುತ್ತದೆ. ಈ ಮೂರು ವಿಷಯಗಳ ಹಿನ್ನೆಲೆಯಲ್ಲಿ ಹಿಂದಿನ ಸರಕಾರ ಒಂದು ಅಪಿಲೇಟ್ ಅಥಾರಿಟಿ ಎಂದು ರಚನೆ ಮಾಡಿತ್ತು. ಆದರೆ ಅದು ರದ್ದಾಗಿದೆ. ಹಾಗಾಗಿ ನಾನು ಸರಕಾರಕ್ಕೆ ಕೇಳಿದಂತಹ ಈ ಮೂರು ಪ್ರಶ್ನೆಗಳ ಹಿನ್ನೆಲೆಯಲ್ಲಿ ವಿಚಾರ ಮಾಡಬೇಕಾಗಿದೆ. ಮೊದಲ ನಮಗೆ 25 ವರ್ಷವಾಯಿತು, ಎರಡನೆಯ ತ್ರಿಶಂಕು ಸ್ಥಿತಿಯಲ್ಲಿರುವಂತಹ ಡಿಕ್ಲರೇಷನ್ ಕೊಡದೇ ಇರುವಂತಹ ಭೂಮಿಗಳ ಅವಸ್ಥೆ, ಮೂರನೆಯದು ತುರ್ತಾಗಿ ನ್ಯಾಯ ಒದಗಿಸಲಿಕ್ಕೇನು ಕ್ರಮ ತಾವು ಕೈಕೊಂಡಿದ್ದೀರಿ? ತಿಳಿಸಬೇಕು.

ಶ್ರೀ ಆರ್.ಎಲ್. ಜಾಲಪ್ಪ: 2-3 ಪ್ರಶ್ನೆಗಳನ್ನು ಎತ್ತಿದ್ದಾರೆ. ಡಿಕ್ಲರೇಷನ್ ಆಗದೇ ಇರುವವರ ಗತಿ ಏನು ಎಂದು ಹೇಳಿದ್ದಾರೆ. ಎಲ್ಲೆಲ್ಲಿ ಡಿಕ್ಲರೇಷನ್ ಆಗ್ಲಿ ಅಲ್ಲಿ ಯಾರ್ಯಾರು ಪೊಸಿಷನ್‌ನಲ್ಲಿದ್ದಾರೆ ವಾಸವಾಗಿದ್ದಾರೆ ಅವರಿಗೇ ಪೊಸಿಷನ್ ಸಿಗುತ್ತದೆ. ಲ್ಯಾಂಡ್ ಲಾರ್ಡಗೆ ಮಾಲೀಕತ್ವ ಸಿಗುತ್ತದೆ.

Sri Kagodu Thimmappa: No, no. Under Section 48, it will vest with the Government, if it is atenanted land by virtue of the operation of the Land Reforms Act, it will vest with the Government.

ನಾನ್ ಟೆನೆಂಟೆಡ್ ಲ್ಯಾಂಡ್ ಇದ್ದರೆ ಅವನಿಗೆ ಉಳಿಯುತ್ತದೆ ನೀವು ಸುಮ್ಮನೆ ಹಾಗೆ ಹೇಳಿ ಬಿಟ್ಟರೆ ಅವನಿಗೆ ಅನುಕೂಲವೇ ಆಯಿತು.

ಶ್ರೀ ಆರ್.ಎಲ್. ಜಾಲಪ್ಪ:- ಟೆನೆಂಟೆಡ್ ಲ್ಯಾಂಡ್ ಆಗಿ ಅದು ಒಂದು ವೇಳೆ ಡಿಕ್ಲರೇಷನ್ ಆಗದಿದ್ದರೆ ಆ ಲ್ಯಾಂಡ್ ಈಗ ಯಾರಿಗೆ ಹೋಗಬೇಕು. ಸರಕಾರಕ್ಕೆ ಬರಬೇಕು. ಹಂಚಿಕೆ ಯಾಗಬೇಕು ಅದನ್ನು ನಾನು ಪರಿಶೀಲಿಸುತ್ತೇನೆ, ಸರಿಯಾಗಿ ಗೊತ್ತಿಲ್ಲ. ಹೈಕೋರ್ಟಿನಿಂದ ಟ್ರಿಬ್ಯುನಲ್‌ಗೆ ಹೋಗುವುದು ಟ್ರಿಬ್ಯುನಲ್‌ನಿಂದ ಹೈಕೋರ್ಟಿಗೆ ಹೋಗುವುದು ಹೀಗೆ ಓಡಾಡಿಕೊಂಡಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೋಸ್ಕರ ಒಂದು ಯೋಜನೆ ಮಾಡಿದ್ದೇವೆ. ಡಿವಿಜನ್ ಟ್ರಿಬ್ಯುನಲ್ ಮಾಡಬೇಕೆಂಬ ಯೋಜನೆ ಇದೆ. ಈ ಕೇಸುಗಳನ್ನು ಮುಗಿಸಬೇಕೆಂಬ ಯೋಚನೆ ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ರೂಪುರೇಷಗಳು ನಿರ್ಧರಿಸಿ ಆಗಿದೆ ತೀರ್ಮಾನ ಮಾಡುತ್ತಿದ್ದೇವೆ. ಹೈಕೋರ್ಟಿನಲ್ಲಿ ಕೂಡ ಈಗ ತೀರ್ಮಾನ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸಾಧ್ಯವಾದಷ್ಟು ಬೇಗ ಮುಗಿಸುತ್ತೇವೆ.

ಡಾ. ಯು. ಚಿತ್ತರಂಜನ್:-ಭೂ ನ್ಯಾಯ ಮಂಡಲಿಯನ್ನು ಯಾವಾಗ ರಚನೆ ಮಾಡುತ್ತಾರೆ? ಈ ಸರಕಾರ ಬಂದು 8 ತಿಂಗಳಾಯಿತು, ಅದನ್ನು ರಚನೆ ಮಾಡುವುದಕ್ಕೆ ಇರುವ ತೊಡಕು ಏನು?

ಶ್ರೀ ಆರ್.ಎಲ್. ಜಾಲಪ್ಪ:- ಈ ಸದನ ಮುಗಿಯವುದರೊಳಗಾಗಿ ಎಲ್ಲಾ ತಾಲ್ಲೂಕಿನಲ್ಲಿ ಭೂ ನ್ಯಾಯಮಂಡಲಿಯನ್ನು ರಚಿಸುತ್ತೇವೆ.

ಡಾ. ಎಂ.ಪಿ. ಕರ್ಕಿ: ಹೊನ್ನಾವರ ಕುಮುಟಾ ತಾಲ್ಲೂಕುಗಳಲ್ಲಿ ಅನೇಕ ಪ್ರಕರಣಗಳು ವಿಚಾರಣೆಗೆ ಬರುವ ಮೊದಲೇ ಖಾಲಿಯಾಗಿವೆ. ಇದರ ಬಗ್ಗೆ ತಾವು ಮಾಡತಕ್ಕಂತಹ ಕ್ರಮ ಏನು? ಭೂ ನ್ಯಾಯ ಮಂಡಲಿಯನ್ನು ಸದನ ಮುಗಿಯುವುದರೊಳಗೆ ಮಾಡುತ್ತೇವೆಂದು ಹೇಳಿದರು. ಇದರ ಸದಸ್ಯರು ಯಾರ್ಯಾರು ಅವರ ಹೆಸರನ್ನು ಹೇಳುವುದು ಬೇಡವೇ? ಆದರೆ ಯಾವ್ಯಾವ ವರ್ಗಕ್ಕೆ ಸೇರಿದಂತಹ ಜನರನ್ನು ಇದರಲ್ಲಿ ಸೇರಿಸುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೇ?

ಶ್ರೀ ಆರ್.ಎಲ್.ಜಾಲಪ್ಪ:- ಒಬ್ಬರು ಹಿಂದುಳಿದವರು ಇರುತ್ತಾರೆ, ಒಬ್ಬರು ಪರಿಶಿಷ್ಟ ಜಾತಿಯವರಿರುತ್ತಾರೆ ಸಾಧ್ಯವಾದರೆ ಒಬ್ಬ ಮಹಿಳೆಯನ್ನು ಸೇರಿಸಬೇಕೆಂದಿದ್ದೇವೆ. ಇನ್ನೊಬ್ಬರು ಜನರಲ್ ಆಗಿ ಇರುತ್ತಾರೆ.

ಡಾ. ಎಂ.ಪಿ. ಕರ್ಕಿ: ಸಾಧ್ಯವಾದರೆ ಎಂದು ಹೇಳುವುದು...

ಅಧ್ಯಕ್ಷರು:- ಇನ್ನೂ ಗೈಡಲೈನ್ಸ್ ನಿರ್ಣಯ ಮಾಡಿಲ್ಲ. ಗೈಡಲೈನ್ಸ್ ಡಿಸೈಡ್ ಮಾಡಿ ಈ ಸದನ ಮುಗಿಯುವುದರೊಳಗೆ ಮಾಡುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ:- ಟ್ರಿಬ್ಯುನಲ್ಲಿನಲ್ಲಿ ಈಗಾಗಲೇ ಜಡ್ಜಮೆಂಟ್ ಆಗಿದೆ. ಆದರೆ ಸರ್ವೇಯರ್ ಇಲ್ಲದ್ದರಿಂದ ಅಳತೆಗೆ ಒಳಪಡಿಸಿ ತೀರ್ಪನ್ನು ನೀಡಲಾಗಿದೆ. ಆದರೆ ಅಳತೆ ಇರುವುದು ಒಂದು, ಪಹಣಿಯಲ್ಲಿರುವುದು ಒಂದು. ಈ ರೀತಿಯಾಗಿ ಜಡ್ಜಮೆಂಟ್ ಸಂಪೂರ್ಣವಾಗಲಿಲ್ಲ. ನನ್ನ ಕ್ಷೇತ್ರದಲ್ಲಿ 11 ಸಾವಿರ ಅರ್ಜಿಗಳು ಬಾಕಿ ಇವೆ. ಇದನ್ನು ಸೆಟಲ್‌ಮೆಂಟ್ ಮಾಡಲಿಕ್ಕೇನು ಕ್ರಮ ತೆಗೆದುಕೊಳ್ಳುತ್ತೀರಿ? 74 ರಿಂದ ಇದುವರೆಗೆ ಇದು ಮುಗಿದಿಲ್ಲ. ಇದನ್ನು ಯಾವಾಗ ಮುಗಿಸುತ್ತೀರಿ.?

ಶ್ರೀ ಆರ್. ಎಲ್. ಜಾಲಪ್ಪ:- ಎಷ್ಟು ಜಮೀನು ಮಾಡುತ್ತಿದ್ದಾರೆ ಅಷ್ಟು ಮಾಡಿಕೊಂಡೇ ಇದ್ದಾರೆ. ರೆಗ್ಯುಲರ್ ಸರ್ವೇಯಾಗಬೇಕೆಂದು ಹೇಳುತ್ತಿದ್ದಾರೆ. 1300 ಜನ ಸರ್ವೇಯರ್ಸ್‌ಗಳು ಕಡಿಮೆ ಇದ್ದಾರೆಂದು ನಾನು ಈಗಾಗಲೇ ಹೇಳಿದ್ದೇನೆ ಸಾಧ್ಯವಾದಷ್ಟು ಬೇಗ ಅವರನ್ನು ರೆಕ್ರೂಟ್ ಮಾಡಿ ಇದನ್ನು ಇಂಪ್ಲೀಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಗೆ ಕೈಗೊಂಡ ಕ್ರಮಗಳು

1343-ಶ್ರೀ ಪಿ. ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯವು ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆಯೇ? ಹಾಗಿದ್ದಲ್ಲಿ ತೀವ್ರವಾಗಿ ಬರಗಾಲವನ್ನು ಎದುರಿಸುತ್ತಿರುವ ಜಿಲ್ಲೆಗಳಾವುವು?

ಆ) ಈ ಬರಗಾಲವನ್ನು ಎದುರಿಸಲು ಸರ್ಕಾರದವರು ಹಾಕಿಕೊಂಡಿರುವ ಪರಿಹಾರ